ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಅಧಿಕಾರಿಗಳ ಸಭೆಯನ್ನು ಮಾಡಿದ್ದೇವೆ. ಅಡಿಗೆಯವರು, ವಾರ್ಡನ್ಸ್, ಅದೇ ರೀತಿಯಾಗಿ ಶಿಕ್ಷಕರ ನೇಮಕಾತಿಯನ್ನು ಕೂಡ ಆದಷ್ಟು ಜಾಗ್ರತೆ ಮಾಡುತ್ತೇವೆ.

ಬೆಂಗಳೂರು ನಗರದಲ್ಲಿ ಖಾದಿ ಬಟ್ಟೆಗಳ ವಸ್ತು ಪ್ರದರ್ಶನ

1628

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ಖಾದಿ ಬಟ್ಟೆಗಳ ಮಾರಾಟ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಮಾರಾಟ ಕೇಂದ್ರಗಳ ಸಂಖ್ಯೆ ಎಷ್ಟು?

ಇ) ಬೆಂಗಳೂರು ನಗರದಲ್ಲಿ ಖಾದಿ ಬಟ್ಟೆ ಹಾಗೂ ಇತರ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಖಾದಿ ಬಟ್ಟೆಗಳಿಗೆ ಹೆಚ್ಚಿನ ರಿಯಾಯಿತಿ ನೀಡಿ ಖಾದಿ ವಸ್ತು ಪ್ರದರ್ಶನಗಳನ್ನು ನಗರದ ಎಲ್ಲಾ ಭಾಗಗಳಲ್ಲೂ ಏರ್ಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಬೆಂಗಳೂರು ನಗರದಲ್ಲಿ ಒಟ್ಟು 27ಪ್ರಮಾಣಿತ ಖಾದಿ ಮಾರಾಟ ಕೇಂದ್ರಗಳನ್ನು ಮಂಡಲಿಯಿಂದ ಹಾಗೂ ಖಾದಿ ಆಯೋಗದಿಂದ ಧನಸಹಾಯ ಪಡೆದ ವಿವಿಧ ಸಂಘ : ಸಂಸ್ಥೆಗಳು ನಡೆಸುತ್ತಿವೆ.

ಆ) ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ 4 ಖಾದಿ ಭಂಡಾರಗಳು ಕಾರ್ಯನಿರ್ವಹಿಸುತ್ತಿವೆ.

ಇ) ವಿವಿಧ ಸಂಘ :ಸಂಸ್ಥೆಗಳಿಗೆ ಖಾದಿ ಮಂಡಲಿ ಮತ್ತು ಖಾದಿ ಆಯೋಗದಿಂದ ಧನಸಹಾಯ ನೀಡಿ, ಬೆಂಗಳೂರು ನಗರದ ಸೂಕ್ತ ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ತೆರೆಯಲು ಪ್ರೋತ್ಸಾಹ ನೀಡುವುದಲ್ಲದೆ ಕಾಲಕಾಲಕ್ಕೆ ಖಾದಿ ಬಟ್ಟೆಗಳ ಚಿಲ್ಲರೆ ಮಾರಾಟದ ಮೇಲೆ ಆಕರ್ಷಕ ರಿಯಾಯಿತಿ ನೀಡಿ, ಸಾಮಾನ್ಯ ಗ್ರಾಹಕರಿಗೂ ಖಾದಿ ಬಟ್ಟೆ ತಲುಪುವಂತೆ ಉತ್ತೇಜನ ನೀಡಲಾಗುತ್ತಿದೆ. ಪ್ರತಿ ವರ್ಷವೂ ಖಾದಿ ಬಟ್ಟೆಗಳ ಮೇಲೆ ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರವು ರಿಯಾಯಿತಿಯನ್ನು ನೀಡುತ್ತಿದೆ. ಎರಡು ಸಂಚಾರಿ ಮಳಿಗೆಗಳನ್ನು ಪ್ರಾರಂಭಿಸಲಾಗಿದ್ದು, ಇವು ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇನ್ನು ಹೆಚ್ಚಿನ ಸಂಖ್ಯೆಯ ಸಂಚಾರಿ ಮಳಿಗೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ನಗರದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಇತ್ತೀಚೆಗೆ ಖಾದಿ ಬಟ್ಟೆಗಳ ವಸ್ತು ಪ್ರದರ್ಶನವನ್ನು ಖಾದಿ ಮಂಡಲಿಯಿಂದ ಏರ್ಪಡಿಸಲಾಗಿತ್ತು. ಈ ವಸ್ತು ಪ್ರದರ್ಶನವು ಅಪಾರ ಜನ ಮನ್ನಣೆ ಗಳಿಸಿ, ಖಾದಿ ಬಟ್ಟೆಗಳು ಹೆಚ್ಚಿನ ರೀತಿಯಲ್ಲಿ ಮಾರಾಟವಾಗಲು ಕಾರಣವಾಯಿತು. ಇದೇ ರೀತಿ ನಗರದ ಇತರೆ ಬಡಾವಣೆಗಳಲ್ಲಿ ಹಂತ ಹಂತವಾಗಿ ವಸ್ತು ಪ್ರದರ್ಶನ ಏರ್ಪಡಿಸಲು ಪರಿಶೀಲಿಸಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾಲ್ಕನೆ ಪ್ರಶ್ನೆಗೆ ಖಾದಿ ಬಟ್ಟೆಗಳಿಗೆ ಹೆಚ್ಚಿನ ರಿಯಾಯಿತಿ ನೀಡಿ ಎಂದು ನಾನು ಕೇಳಿದ್ದೆ. ನಗರದ ಎಲ್ಲಾ ಭಾಗದಲ್ಲೂ ಕೂಡ ಖಾದಿ ಬಟ್ಟೆಯ ಬಗ್ಗೆ ವಸ್ತು ಪ್ರದರ್ಶನವನ್ನು

ಏರ್ಪಡಿಸಿ ಎಂದು ಕೇಳಿದ್ದೆ. ಆದರೆ ಮಲ್ಲೇಶ್ವರಂನಲ್ಲಿ ಮಾಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. ಎಲ್ಲಾ ಭಾಗಗಳಲ್ಲೂ ವಸ್ತು ಪ್ರದರ್ಶನವನ್ನು ಮಾಡಿ ಎಂದು ನಾನು ಕೇಳುತ್ತಿದ್ದೇನೆ. :ಜಯನಗರ, ಇಂದಿರಾನಗರ ಹಾಗೂ ಎಲ್ಲೆಲ್ಲಿ ಹೆಚ್ಚಿನ ಜನಸಂದಣಿ ಇದೆಯೋ ಅಂತಹ ಕಡೆ ವಸ್ತುಪ್ರದರ್ಶನವನ್ನು ಮಾಡಬೇಕು. ಹಾಗೂ ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲೂ ಇಂತಹ ವಸ್ತು ಪ್ರದರ್ಶನವನ್ನು ಮಾಡಿ ಎಂಬುದು ನನ್ನ ಸಲಹೆ. ನಾನು ರಿಯಾಯಿತಿಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ ಅದಕ್ಕೆ ತಾವು ಉತ್ತರವನ್ನು ಕೊಟ್ಟಿರುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಲಿಂಗಾರೆಡ್ಡಿಯವರು ಕೊಟ್ಟಿರುವಂತಹ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಖಾದಿ ಬಟ್ಟೆಯಿಂದ ತಯಾರಾಗುವಂತಹ ವಸ್ತುಗಳು ಜನರಲ್ಲಿ ಹೆಚ್ಚಿನ ಪಾಪ್ಯುಲಾರಿಟಿ ಮಾಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡು ನಾವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಈಗಾಗಲೇ ಅವರಿಗೆ ಒದಗಿಸಲಾಗಿರುವ ಉತ್ತರದ ಪ್ರಕಾರವಾಗಿ ಬೆಂಗಳೂರು ನಗರದಲ್ಲಿ ಸುಮಾರು 27ಕೇಂದ್ರಗಳನ್ನು ತೆರೆದು ಆ ಕೇಂದ್ರಗಳ ಮುಖಾಂತರವಾಗಿ ಖಾದಿ ಬಟ್ಟೆಗಳನ್ನು ವಿತರಿಸಲಿಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಖಾದಿ ಬಟ್ಟೆಯ ಬಗ್ಗೆ ಒಂದು ಮಾತನ್ನು ಮಾನ್ಯ ಶಾಸಕರಿಗೆಲ್ಲಾ ಹೇಳಲಿಕ್ಕೆ ನನಗೆ ತುಂಬಾ ಸಂತೋಷವಾಗುತ್ತದೆ. ಆರೋಗ್ಯದ ದೃಷ್ಟಿಯಿಂದ ಖಾದಿ ಬಟ್ಟೆಯನ್ನು ಧರಿಸುವುದು ಒಂದು ಉತ್ತಮವಾದಂಥದ್ದು. ಬೇರೆ ಬೇರೆ ಪ್ರದೇಶಗಳಲ್ಲೂ ಕೂಡ ಈ ಖಾದಿ ಬಟ್ಟೆಗೆ ಬಹಳಷ್ಟು ಡಿಮ್ಯಾಂಡ್ ಇದೆ. ನಮ್ಮ ಸರ್ಕಾರದವರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಎಲ್ಲಾ ಕಡೆಯಲ್ಲೂ 27ಪ್ರದೇಶಗಳಲ್ಲಿಯೂ ಕೂಡ ಖಾದಿ ಮಾರಾಟ ಕೇಂದ್ರವನ್ನು ಸ್ಥಾಪಿಸಿಕೊಂಡು, ಅದರ ಮುಖಾಂತರವಾಗಿ ಖಾದಿ ಬಟ್ಟೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಧರಿಸಲಿಕ್ಕೆ, ಮತ್ತು ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ಆಕರ್ಷಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದಲ್ಲದೆ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ 4ಖಾದಿ ಭಂಡಾರ ಅಂಗಡಿಯನ್ನು ತೆರೆದು ಖಾದಿ ಬಟ್ಟೆಯನ್ನು ಜನಪ್ರಿಯತೆಗೊಳಿಸಲು ಹೆಚ್ಚಿನ ಕ್ರಮವನ್ನು ತೆಗೆದುಕೊಂಡಿದ್ದೇವೆ. ಜನರಿಗೆ ಕಡಿಮೆ ದರದಲ್ಲಿ ಖಾದಿಬಟ್ಟೆಗಳು ಸಿಗುತ್ತಿದೆ. ನಾನು ಈ ಸಂದರ್ಭದಲ್ಲಿ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮುಖ್ಯವಾಗಿ ಖಾದಿ ಬಟ್ಟೆಯನ್ನು ಧರಿಸುವುದರಿಂದ, ಆರೋಗ್ಯದ ದೃಷ್ಟಿಯಿಂದಲೂ ಮತ್ತು ನಮ್ಮ ರಾಜ್ಯದ ಗುಡಿ ಕೈಗಾರಿಕೆಯ ದೃಷ್ಟಿಯಿಂದಲೂ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಂತೆ ಆಗುತ್ತದೆ. ಎಲ್ಲಾ ಜನರು ಕೂಡ ಖಾದಿ ಬಟ್ಟೆಯನ್ನು ಧರಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂಬ ಬಗ್ಗೆ ಒಂದು ಆಹ್ವಾನವನ್ನು ನಮ್ಮ ಇಲಾಖೆಯ ಪರವಾಗಿ ಮಾಡಲಿಕ್ಕೆ ನಾನು ಬಯಸುತ್ತಿದ್ದೇನೆ.

ಶಾಸಕರು ಹೇಳಿದ ಪ್ರಕಾರವಾಗಿ ನಗರದ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಇತ್ತೀಚಿಗೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಅತಿ ಉತ್ತಮವಾದಂತಹ ವಸ್ತು ಪ್ರದರ್ಶನವನ್ನು ಮಾಡಿದೆವು. ವಸ್ತುಪ್ರದರ್ಶನವು ಬಹಳ ಚೆನ್ನಾಗಿ ನಡೆಯಿತು. ಈ ವಸ್ತು ಪ್ರದರ್ಶನಕ್ಕೆ ಬೇರೆಬೇರೆ ರಾಜ್ಯಗಳಿಂದ ಜನರು ಬಂದು ಭಾಗವಹಿಸಿದ್ದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗದಿಂದ ತಯಾರಾಗುವಂತಹ ಸರಕುಗಳಾಗಲಿ, ವಸ್ತುಗಳಾಗಲಿ, ಬಟ್ಟೆಗಳಾಗಲಿ, ಹೊರಗಡೆಯಿಂದ ಜನರನ್ನು ಆಕರ್ಷಿಸುವಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ತಾವು ಸಬ್ಸಿಡಿಯ